ದಿನಾಂಕ: **01.08.2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ನೀಡಲಾಯಿತು.

ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಎಸ್ ಎಸ್ ವಕೀಲರಿಂದಃ-

ನನ್ನ ಅಜ್ಜಿಯ ಹೆಸರು ನಾರಾಯಣಮ್ಮ. ನನ್ನ ತಂದೆಗೆ ಶ್ರೀನಿವಾಸ ಮತ್ತು ನಾರಾಯಣಸ್ವಾಮಿ ಎಂಬ ಇಬ್ಬರು ಸಹೋದರರು ಇರುತ್ತಾರೆ. ನನ್ನ ತಂದೆ ಮತ್ತು ಅವರ ಸಹೋದರರು ನೊಂದಾಯಿತ ವಿಭಾಗದ ಪತ್ರದ ಮೂಲಕ ವಿಭಾಗ ಮಾಡಿಕೊಂಡಿರುತ್ತಾರೆ ನನಗೆ ಗೊತ್ತಿಲ್ಲ. ವಿಭಾಗದಲ್ಲಿ ಸಿ ಶೆಡ್ಯೂಲ್ ಆಸ್ತಿಗಳು ನನ್ನ ತಂದೆಯ ಭಾಗಕ್ಕೆ ಬಂದಿರುತ್ತದೆ ಎಂದರೆ ಸಾಕ್ಷಿಯು ಮೌನವಾಗಿರುತ್ತಾರೆ. ದಾವಾ ಸ್ವತ್ತು ಮತ್ತು ಭೂದಾಳ ಗ್ರಾಮದ ಸ.ನಂ.23/2 ರಲ್ಲಿ 2 ಎಕರೆ 2 ಗುಂಟೆ ಪೈಕಿ ಉತ್ತರದ ಕಡೆ 26 ಗುಂಟೆ ಮತ್ತು ಸ.ನಂ.20/2 ಎ ಜಮೀನಿನಲ್ಲಿ 1 ಎಕರೆ 2 ಗುಂಟೆ ಪೈಕಿ 4 ಗುಂಟೆ ಪೈಕಿ ಮಧ್ಯ ಭಾಗದಲ್ಲಿ 1 ವರೆ ಗುಂಟೆ ನನ್ನ ತಂದೆಯ ವಿಭಾಗಕ್ಕೆ ಬಂದಿರುತ್ತದೆ ಎಂದು ವಿಭಾಗ ಪತ್ರದಲ್ಲಿ ತೋರಿಸಿರುತ್ತಾರೆ ಎಂದರೆ ಸರಿ. ಅದೇ ರೀತಿ ಅಸಸ್ ಮೆಂಟ್ ನಂಬರ್ 2453 ಮತ್ತು 2514 ರ ಮನೆಗಳನ್ನು ನನ್ನ ತಂದೆಯ ಭಾಗಕ್ಕೆ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಒಂದು ಮನೆಯನ್ನು ಕೊಟ್ಟಿರುತ್ತಾರೆ ಎಂದು ಉತ್ತರಿಸಿರುತ್ತಾರೆ.

2. ನಾನು ಸದರಿ ದಾವೆಯನ್ನು 2 ನೇ ಪ್ರತಿವಾದಿಗೆ ಮಾರಾಟ ಮಾಡಿರುವ ಸ್ವತ್ತಿಗೆ ಸಂಬಂಧಿಸಿದಂತೆ ಮಾತ್ರ ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ದಾವಾ ಸ್ವತ್ತಿನಲ್ಲಿ 1997 ರಲ್ಲಿ 10 ವರೆ ಗುಂಟೆ ಮತ್ತು ಉಳಿದ 10 ಗುಂಟೆಯನ್ನು 1998 ರಲ್ಲಿ 1 ನೇ ಪ್ರತಿವಾದಿ 2 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಮೌನವಾಗಿರುತ್ತಾರೆ. 1997 ರಲ್ಲಿ ನನಗೆ 2 ವರ್ಷ. ನನ್ನ ಮತ್ತು 2 ನೇ ವಾದಿಯ ಶಾಲಾ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನನ್ನ ತಂದೆ ಅಂದರೆ 1 ನೇ ಪ್ರತಿವಾದಿ ಕುಟುಂಬದ ನಿರ್ವಹಣೆಗಾಗಿ ಮತ್ತು ನನ್ನ ಮತ್ತು 2 ನೇ ವಾದಿಯ ಪೋಷಣೆಗಾಗಿ 1997-98 ರಲ್ಲಿ 2 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಗೆ ಮಾರಾಟ ಮಾಡಿರುವ ಸ್ವತ್ತನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ದಾವೆಯನ್ನು ಹೂಡಿರುತ್ತೇನೆ ಎಂದರೆ

ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನಮಗೆ ಯಾವುದೇ ರೀತಿಯ ಹಕ್ಕು ಸ್ವಾದೀನ ಇಲ್ಲ ಎಂದರೆ ಸರಿಯಲ್ಲ. ನಾನು ದಾವೆಯನ್ನು ಕಾಲಮಿತಿಯಲ್ಲಿ ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ. ಹೇ. ಕೇ. ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಶಿಡ್ಲಘಟ್ಟ.